## ನಾಳೆ ರಜಾ

ನದಿಯ ಆಚೆ ದಡದಿಂದ ಬರುವಾಗ ಪ್ರಿನ್ಸಿಪಾಲ್ ಪ್ರವಾಹದಲ್ಲಿ ಮುಳುಗೇಳುತ್ತಿರುವುದನ್ನು ನೋಡಿದ ಗುಂಡ, ಜೋರಾಗಿ ಕಿರುಚತೊಡಗಿದ.

'ಕಾಪಾಡಿ, ಕಾಪಾಡಿ' ಅಂತ ಅಲ್ಲ!

'ನಾಳೆ ಶಾಲೆಗೆ ರಜಾ.. ರಜಾ..!'

★★★

## ಛೇ!

ಕ್ಲಾಸಿನಲ್ಲಿ ಪೊಗದಸ್ತಾಗಿ ನಿದ್ದೆ ಮಾಡುತ್ತಿದ್ದ ಸಿದ್ರಾಮನನ್ನು ಎಬ್ಬಿಸಿ ಹಿಂದಿ ಪಂಡಿತರು ಕೇಳಿದರು.

ಹಿಂದಿಯಲ್ಲಿ 6ಕ್ಕೆ ಏನೆನ್ನುತ್ತಾರೆ?

ನಿದ್ರೆ ಹಾಳಾಯಿತಲ್ಲ ಎಂದು ಸಿದ್ರಾಮ ಎದ್ದು ನಿಂತು ಅಸಹನೆಯಿಂದ 'ಛೇ' ಎಂದ.

'ಶಭಾಷ್' ಎಂದ ಗುರುಗಳು ಉಳಿದವರಿಗೆ ಸಿದ್ರಾಮನನ್ನು ನೋಡಿ ಕಲಿತುಕೊಳ್ಳಿ ಎಂದರು.

★★★

## ಭೂಕಂಪ

ನೇಪಾಳದಲ್ಲಿದ್ದ ಅಳಿಯನಿಗೆ ಅತ್ತೆ ಫೋನ್ ಮಾಡಿ ಕೇಳಿದರು.

ಅಳಿಯಂದ್ರೇ ಈಗ ಭೂಕಂಪ ಹೇಗಿದೆ?

ಒಳಗೆ ಅಡಿಗೆ ಮಾಡುತ್ತಿರಬೇಕು ಅತ್ತೆ, ಕರೀತೀನಿ ತಡೀರಿ– ಎಂದು ಅಳಿಯದೇವರು ತಮ್ಮ ಪತ್ನಿಯನ್ನು ಕರೆದರು.

★★★

## ಖಾರ ಜಾಸ್ತಿ

ನಾನು ನಿನಗೆ ಉಡುಗೊರೆಯಾಗಿ ಕೊಟ್ಟಿದ್ದ ಬೆಕ್ಕು ನಿನಗೆ ಇಷ್ಟವಾಯಿತಾ?

ಇಷ್ಟವೇ? ತುಂಬಾ ಸೊಗಸಾಗಿತ್ತು. ಆದರೆ ನನ್ನ ಹೆಂಡತಿ ಕೊಂಚ ಖಾರ ಜಾಸ್ತಿ ಹಾಕಿಬಿಟ್ಟಿದ್ದಳು!

**(ಸಂಗ್ರಹ) ಕೆ.ಲೀಲಾ ಶ್ರೀನಿವಾಸ್**



ಒಬ್ಬಾತ ಏರ್‌ಪೋರ್ಟಿಗೆ ಫೋನ್ ಮಾಡಿ ಕೇಳಿದ 'ಇಲ್ಲಿಂದ ಅಮೆರಿಕಕ್ಕೆ ಎಷ್ಟು ಗಂಟೆಗಳ ಪಯಣ?' ಯಾವುದೋ ಕೆಲಸದಲ್ಲಿ ಬಿಸಿಯಾಗಿದ್ದ ಆಪರೇಟರ್ 'ಒಂದು ಸೆಕೆಂಡ್ ಸಾರ್...' ಎಂದಳು. ಫೋನ್ ಮಾಡಿದ್ದಾತ 'ಓಕೆ, ಥ್ಯಾಂಕ್ಸ್ ಮೇಡಂ' ಎಂದು ಫೋನ್ ಇಟ್ಟು ಬಿಟ್ಟ!

★★★

ಗಂಡ ತನ್ನ ಹೆಂಡತಿಗೆ ಡೈಮಂಡ್ ನೆಕ್ಲೆಸ್ ಕೊಡಿಸಿದ. ಆನಂತರ ಅವಳು ಆರು ತಿಂಗಳು ಮಾತನಾಡಲೇ ಇಲ್ಲ. ಆಶ್ಚರ್ಯಗೊಂಡ ಅವನ ಸ್ನೇಹಿತ ಕೇಳಿದ 'ಡುಪ್ಲಿಕೇಟ್ ನೆಕ್ಲೇಸ್ ಕೊಟ್ಟಿದ್ದೆನೋ?' ಅದಕ್ಕೆ ಈತ ಹೇಳಿದ 'ಇಲ್ವೋ ಅಸಲೀನೆ. ನೆಕ್ಲೆಸ್ ಕೊಡಿಸೋ ಮೊದಲು ನಾವು ಅಗ್ರಿಮೆಂಟ್ ಮಾಡಿಕೊಂಡಿದ್ದೇ ಹಾಗೆ!'

★★★

'ಒಂದು ಒಳ್ಳೆಯ ಹೋಟೆಲ್‌ಗೆ ಗಂಡ ಹೆಂಡತಿ ಬಂದಿದ್ದರು. ಆರ್ಡರ್ ಮಾಡಿದ ಖಾದ್ಯಗಳೆಲ್ಲ ಬಂದ ಮೇಲೆ ಗಂಡ ಹೇಳಿದ 'ರುಚಿಯಾಗಿದ್ದ ಹಾಗಿದೆ. ಬಿಸಿ ಇದ್ದಾಗಲೇ ತಿನ್ನೋಣ' ಹೆಂಡತಿ ಕೇಳಿದಳು 'ಅಲ್ಲಾರಿ, ಮನೇಲಿ ಊಟ ಮಾಡೋಕೆ ಮುಂಚೆ ನೀವು ಪ್ರಾರ್ಥನೆ ಮಾಡ್ತೀರಲ್ಲ?' ಹೆಂಡತಿಯ ಮುಖ ನೋಡುತ್ತಾ ಗಂಡ ಹೇಳಿದ 'ಇಲ್ಲಿಯ ಭಟ್ಟನಿಗೆ ಅಡುಗೆ ಮಾಡೋಕೆ ಬರುತ್ತೆ ಕಣೇ!'

**(ಸಂಗ್ರಹ) ಬಿ.ಎಸ್. ರಾಜಲಕ್ಷ್ಮಿ, ಹಾಸನ**

---

## ರಹಸ್ಯ

ನಾನು ಮದುವೆಯಾಗಿ 10 ವರ್ಷಗಳಾಯಿತು, ಇಂದಿಗೂ ಒಬ್ಬಳನ್ನೇ ಪ್ರೀತಿಸುತ್ತಿದ್ದೇನೆ. ವಿಶೇಷವೆಂದರೆ ನಾನವಳನ್ನು ಪ್ರೀತಿಸುತ್ತಿರುವುದು ಇಂದಿಗೂ ಹೆಂಡತಿಗೆ ಗೊತ್ತಾಗಿಲ್ಲ.

★★★

ಹೋಟೆಲಿನಲ್ಲಿ ಹಿಂದಿನ ದಿನ ಕೆಲಸಕ್ಕೆ ಸೇರಿದ ಕ್ಲೀನರ್‌ನನ್ನು ಕೇಳುತ್ತಿದ್ದರು 'ಮೆನೇಜರ್ ನಿನ್ನ ಕೆಲಸ ಏನೇನು ಅಂತ ಹೇಳಿದ್ದಾರೆ ತಾನೇ?'

ಕ್ಲೀನರ್: ಹೌದು ಸಾರ್ ಹೇಳಿದ್ದಾರೆ. ನೀವು ಬರುವುದನ್ನು ದೂರದಿಂದಲೇ ನೋಡಿ ಅವರನ್ನು ಎಚ್ಚರಿಸುವುದು. ನಾನು ಭಾರಿ ಬಿಜಿಯಾಗಿರುವಂತೆ ನಟಿಸುವುದು ಎಲ್ಲವನ್ನೂ ಹೇಳಿಕೊಟ್ಟಿದ್ದಾರೆ.

★★★

## ತೋರಿಸ್ತಿದ್ದೆನಲ್ಲ..!

ಸಿನಿಮಾ ಆರಂಭವಾದ ಕೆಲ ನಿಮಿಷಗಳಲ್ಲೇ ಗೊರಕೆ ಹೊಡೆಯುತ್ತಿದ್ದ ಗಂಡನನ್ನು ಸೀಟಿನಲ್ಲೇ ತಿವಿದು ಪತ್ನಿ ಹೇಳಿದಳು– ಏನ್ರೀ, ದುಡ್ಡು ಕೊಟ್ಟು ಬಂದು, ಸಿನಿಮಾ ನೋಡೋದನ್ನ ಬಿಟ್ಟು ನಿದ್ದೆ ಹೊಡೀತಿದೀರಲ್ಲಾ?

ಗಂಡ: ಏನು ನೋಡೋದೇ? ಒಂದಾದರೂ ಫೈಟಿಂಗ್ ಇಲ್ಲ, ಜಗಳ ಇಲ್ಲ... ಬೋರ್ ಹೊಡೀತಿದೆ!

ಹೆಂಡತಿ: ಹೌದಾ! ಮೊದಲೇ ಹೇಳಿದ್ದರೆ ಮನೇಲೇ ತೋರಿಸುತ್ತಿದ್ದೆನಲ್ಲ!

★★★

## ಕೆಲಸ

ಸುಮಂತರಾಯರು ತಮ್ಮ



## ಆಪರೇಷನ್ನಾ?

ಮರೆಗುಳಿ ಡಾಕ್ಟರ್ ಅಮರೇಶ್ ಲಗುಬಗೆಯಿಂದ ಆಪರೇಷನ್ ಥಿಯೇಟರ್ ಒಳ ಹೋಗಿ ಕೆಲಸ ಮುಗಿಸಿ ಬೆವರೊರೆಸಿಕೊಳ್ಳುತ್ತ ಬಂದರು.

ರೋಗಿಯ ಬಂಧು: ಸಾರ್, ನಮ್ಮ ಪೇಷಂಟ್ ಹೇಗಿದ್ದಾರೆ? ಆಪರೇಷನ್ ಸಕ್ಸಸ್ ತಾನೇ?

ಡಾಕ್ಟರ್ ಬೆಚ್ಚಿ ಬಿದ್ದರು; ಅಯ್ಯೋ! ಅದು ಆಪರೇಷನ್ನಾ? ನಾನು ಪೋಸ್ಟ್‌ಮಾರ್ಟಮ್ ಅಂದ್ಕೊಂಡ್ಬಿಟ್ಟೆ!

**(ಸಂಗ್ರಹ) ಕೆ.ಶ್ರೀನಿವಾಸರಾವ್**